



ಹಣ್ಣು ಮಾಗಿದ ನಂತರ ಕುಯಿದು ಹಣ್ಣಿನ ಸಿಪ್ಪೆಯನ್ನು ಬೇರ್ಪಡಿಸಿದ್ದಾಗ ಬಿಳಿಯ ಬಣ್ಣದ ಒಳತಿರುಳು ತುಂಬಾ ರುಚಿಕರ. ಎಲ್ಲರಿಗೂ ಪ್ರಿಯವಾದ ಹಣ್ಣು ಇದಾಗಿದೆ.

ಇಂತಹ ಲಿಚಿ ಹಣ್ಣಿನ ಗಿಡವನ್ನು ಹಲವು ವರ್ಷಗಳಿಂದ ಪ್ರತ್ಯೇಕ ಜಾಗದಲ್ಲಿ ಕೊಡಗಿನ ಕೇಂದ್ರ ಬಿಂದುವಾದ  ಚೆಟ್ಟಳ್ಳಿಯ ಕೇಂದ್ರೀಯ ತೋಟಗಾರಿಕಾ ಪ್ರಾಯೋಗಿಕ ಕೇಂದ್ರದಲ್ಲಿ ವೈಜ್ಞಾನಿಕವಾಗಿ ಬೆಳೆಸಲಾಗುತ್ತಿದೆ. ಈ ವರ್ಷದ ಲಿಚಿ ಫಸಲು ಕುಯಿಲಿಗೆ ಬಂದಿದ್ದು. ಮಳೆಯ ಅಭಾವದಿಂದ ಫಸಲು ಕಡಿಮೆಯಾಗಿದೆ.

ಲಿಚಿ ಬೆಳೆಯ ಬಗ್ಗೆ ಕ್ರಷಿಕರಲ್ಲಿ ಅರಿವನ್ನು ಮೂಡಿಸುವ ಉದ್ದೇಶದಿಂದ ಚೆಟ್ಟಳ್ಳಿ ಕೇಂದ್ರೀಯ  ತೋಟಗಾರಿಕಾ ಪ್ರಾಯೋಗಿಕ ಕೇಂದ್ರದಲ್ಲಿ ಹಲವು ವರ್ಷಗಳಿಂದ ಪ್ರಾತ್ಯಕ್ಷಿಕೆಯನ್ನು ಏರ್ಪಡಿಸಿ ತಜ್ಞರಿಂದ ಲಿಚಿ ಹಣ್ಣಿನ ಮಹತ್ವ,ಬೆಳವಣಿಗೆ, ನಿರ್ವಹಣೆಯ ಬಗ್ಗೆ ಕಾರ್ಯಾಗಾರವನ್ನು ಏರ್ಪಡಿಸಲಾಗುತಿದೆ.

ಈ ಲಿಚಿಹಣ್ಣು ಮನುಷ್ಯರಿಗಲ್ಲದೆ ಬಾವಲಿಗಳಿಗೆ ಹಾಗೂ ಪಕ್ಷಿಗಳಿಗೆ ಬಲು ಇಷ್ಟ. ಹಣ್ಣಾಗುವ ಸಮಯದಲ್ಲಿ ಬಾವಲಿಗಳೆಲ್ಲ ಮುತ್ತಿಕೊಳ್ಳುತ್ತದೆ. ಅದನ್ನು ನಿಭಾಯಿಸಲು ಪ್ರತೀ ಲಿಚಿ ಗಿಡಗಳ ಮೇಲೆಲ್ಲ ಬಲೆಗಳನ್ನು ಹಾಕಿದರೆ ಸ್ವಲ್ಪ ಮಟ್ಟಿಗೆ ನಿಯಂತ್ರಿಸ ಬಹುದೇ ವಿನಹ ಪೂರ್ತಿ ನಿಯಂತಿಸಲು ಸಾಧ್ಯವಾಗುತ್ತಿಲ್ಲ ಎನ್ನುತ್ತಾರೆ ಲಿಚಿ ಬೆಳೆಗಾರರು.

ಲಿಚಿ ಹಣ್ಣಿನ ಜೂಸ್, ವೈನ್ ಹಾಗೂ ಹಲವು ಪದಾರ್ಥಗಳನ್ನೆಲ್ಲ ತಯಾರಿಸಲು ಬಳಸಲಾಗುತ್ತಿದ್ದು ಬಾರೀ ಬೇಡಿಕೆ ಇದೆ. ಮಾರುಕಟ್ಟೆಯಲ್ಲಿ ಪ್ರತೀ ಕೆಜಿಗೆ ರೂ.200ರಿಂದ 300ಗಳಷ್ಟಿದೆ. ಕೊಡಗಿನ ಕೆಲವು ಕೃಷಿಕರು ತಮ್ಮ ತಮ್ಮ ತೋಟಗಳಲ್ಲಿ ಬೆಳೆಸಿ ಲಿಚಿ ಹಣ್ಣನ್ನು ಸವಿಯು ಸಮಯವೇ ಇದಾಗಿದೆ.